ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

14

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ        ದಿನಾಂಕ : DATE 20/10/20

**ಪ್ರಧಾನಿ ಮಾತು** ಮೈಸೂರು ವಿವಿ ಘಟಿಕೋತ್ಸವ | ಕೌಶಲ್ಯ ಸೂತ್ರದ ಅಗತ್ಯ ಒತ್ತಿಹೇಳಿದ ಪ್ರಧಾನಿ

# ಕೌಶಲ ವೃದ್ಧಿಗೆ ಶಿಕ್ಷಣ ನೀತಿ ಆದ್ಯತೆ: ಪಿಎಂ

• **ಕನ್ನಡಪ್ರಭ ವಾರ್ತೆ ಮೈಸೂರು**

ಕೌಶಲ್ಯ, ಮರು ಕೌಶಲ್ಯ ಮತ್ತು ಕೌಶಲ್ಯ ವೃದ್ಧಿ ಇಂದಿನ ಶಿಕ್ಷಣದ ಅಗತ್ಯವಾಗಿದೆ. ಕೇಂದ್ರ ಸರ್ಕಾರದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಕುರಿತು ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಸೋಮವಾರ ನಡೆದ ಮೈಸೂರು ವಿವಿಯ ಶತಮಾನದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ವರ್ಚುವಲ್ ಭಾಷಣ ಮಾಡಿದ ಅವರು, ಇಂದಿನ ದಿನಗಳಲ್ಲಿ ಕೌಶಲ್ಯ ವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಯುವಕರು ವೃತ್ತಿಯ ಸ್ವರೂಪ ಬದಲಿಸಿಕೊಳ್ಳುವ ಅನಿವಾರ್ಯತೆ ಇದ್ದು, ಹೊಸ ಶಿಕ್ಷಣ ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ಮೂಲಭೂತ ಬದಲಾವಣೆ ತರುವುದಲ್ಲದೆ, ಯುವಕರನ್ನು ಹೆಚ್ಚು ಸ್ಪರ್ಧಾತ್ಮಕವಾಗಿಸುತ್ತದೆ ಎಂದರು.

ವಿದ್ಯಾರ್ಥಿಗಳು ಜಾಗತಿಕ ತಂತ್ರಜ್ಞಾನ ಮತ್ತು ಸ್ಥಳೀಯ ಸಂಸ್ಕೃತಿಯ ಅಧ್ಯಯನದ ಕಡೆಗೂ ಗಮನ ನೀಡಬೇಕು. ಜಾಗತಿಕ ತಂತ್ರಜ್ಞಾನದ ಮೂಲಕ ಸ್ಥಳೀಯ ಉದ್ಯಮವನ್ನು ಅಭಿವೃದ್ಧಿಪಡಿಸುವತ್ತ ಗಮನ ಕೇಂದ್ರೀಕರಿಸಬೇಕು ಎಂದರು.

## ಕನ್ನಡದಲ್ಲಿ ಶುಭಾಶಯ, ಗೊರೂರು ಸ್ಮರಣೆ

ಘಟಿಕೋತ್ಸವ ಭಾಷಣದ ವೇಳೆ ಪ್ರಧಾನಿ ಮೋದಿ ಅವರು ಪದವಿ ಪಡೆದ ಸಂಭ್ರಮದಲ್ಲಿರುವ ವಿವಿ ವಿದ್ಯಾರ್ಥಿಗಳಿಗೆ ಕನ್ನಡದಲ್ಲೇ ಶುಭಾಶಯ ಕೋರಿದರು. ಜತೆಗೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ನೆನೆದು 'ಶಿಕ್ಷಣವೇ ಬೆಳಕು' ಎಂಬ ಅವರ ಉಕ್ತಿಯನ್ನು ಕನ್ನಡದಲ್ಲೇ ಉಲ್ಲೇಖಿಸುವ ಮೂಲಕ ಶಿಕ್ಷಣದ ಅಗತ್ಯತೆ ತಿಳಿಸಿಕೊಟ್ಟರು. ಕೋವಿಡ್ ಕಾರಣದಿಂದ ನಿರ್ಬಂಧ ಇದ್ದರೂ, ಹಬ್ಬ ಆಚರಣೆ ಉತ್ಸಾಹ ಕುಂದಿಲ್ಲ. ಮಳೆಯಿಂದಾಗಿ ಹಬ್ಬದ ಅಬ್ಬರ ಸ್ವಲ್ಪ ಮಂಕಾಗಿದೆ ಅಷ್ಟೆ ಎಂದು ತಿಳಿಸಿದರು.



100ನೇ ಘಟಿಕೋತ್ಸವದಲ್ಲಿ ಮೋದಿ ವರ್ಚುವಲ್ ಭಾಷಣ

ಇದೇ ವೇಳೆ, ಮೈಸೂರು ವಿವಿ ಇತಿಹಾಸ ದೊಡ್ಡದಿದೆ ಎಂದ ಅವರು, ರಾಜರ್ಷಿ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ದೂರದೃಷ್ಟಿ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದದ್ದು ಎಂದು ಇದೇ ವೇಳೆ ಪ್ರಧಾನಿ ಮೋದಿ ತಿಳಿಸಿದರು. ಮೈಸೂರು ವಿವಿಯು ದೇಶದ ಉತ್ತಮ ಶಿಕ್ಷಣ ಸಂಸ್ಥೆಯಲ್ಲಿ ಒಂದಾಗಿದೆ. ವಿವಿಯು ಹೆಚ್ಚು ಅಧ್ಯಯನ ಕೇಂದ್ರಗಳನ್ನು ಒಳಗೊಂಡಿದ್ದು ತಾಂತ್ರಿಕವಾಗಿಯು ಅಭಿವೃದ್ಧಿ ಹೊಂದಿದೆ ಎಂದು ತಿಳಿಸಿಸಿದರು.